2. ADDRESS READ BY Mr. SRINIVAS SITARAM KULKARNI, HARIHAR.

1st October 1906.

ಶ್ರೀಮನ್ಮಹಾರಾಜ ಕೃಷ್ಣಸಾರ್ವಭೌಮಾಲಂಕಾರ ಸಿಂಹಾಸನಸ್ಥಾನ ಶ್ರೀ ಮೈಸೂರ ಸಂಸ್ಥಾನ ಕಾರ್ಯನಿರ್ವಾಹಕ ಪದತೇಜಃಪುಂಜ, ಘನವನ್ನೈದಿರ್ವ ವಿ. ಪಿ. ಮಾಧವರಾವ್, ಸಿ. ಐ. ಇ., ಸ್ವಾಮಿಯವರ ಸನ್ನಿಧಾನದಲ್ಲಿ.

———: o :———

ಹರಿಹರ ಸಬ್ ತಾಲ್ಲೂಕು ಮತ್ತು ಪುರನಿವಾಸಿಗಳು ಭಯಭಕ್ತಿ ವಿಶ್ವಾಸಪೂರ್ವಕ ವಿಜ್ಞಾಪಿಸಿಕೊಳ್ಳುವುದು:—

1. ಸ್ವಾಮಿಯವರು ಶಿವಮೊಗ್ಗಾ ಡಿಸ್ಟ್ರಿಕ್ಟ್ ಡಿಪ್ಯೂಟಿ ಕಮಿಷನರ್, ಪೊಲೀಸ್ ಇನ್‌ಸ್ಪೆಕ್ಟರ್ ಜನರಲ್, ಕಾರ್ ಸಿಲ್ಲಕ್ ಪದಂಗಳೊಳ್ ವಿಮರ್ಶಿಸಿರ್ಪ ಕಾರ್ಯಂಗಳು ಏತತ್ಪರ್ಯಂತಂ ತಮ್ಮ ಅದ್ವಿತೀಯ ಕೀರ್ತಿಯಂ ಬೀರುತ್ತಿರ್ಪುವು. ಅದರೊಳಾವುದೊಂದಂಪರಿಭಾವಿಸಲ್ಪ್ರಯತ್ನಪಡುವುದು ನಿರ್ದುಷ್ಟಮಾದ ಹಾಟಕಕ್ಕೆ ವರ್ಣವೀವ ಪರಿಮಳಭರ ಕೇತಕೀಕುಸುಮಕ್ಕೆ ಪರಾಗಪೂಸುವರೀತಿಯೋಳ್, ಬರಿದೆ ಆಯಸವಾಗಿರ್ಪುದು.

2. ಸ್ವಾಮಿಯವರ ಧೈರ್ಯ, ಸ್ಥೈರ್ಯ, ಪ್ರಜ್ಞಾ, ಊಹಾಪೋಹ ವಿಚಕ್ಷಣತೆ ನೈಜವಾದುದೆಂಬದು ಶ್ರೀಮನ್ಮಹಾರಾಜರವರು ಪರದೇಶಭೊಳಿರ್ದ ಸ್ವಾಮಿಯವರಂ ಅತ್ಯಾತುರದಿಂ ಪರಮಪದಕ್ಕೆ ಬರವಾಡಿಕೊಂಡಿರ್ಪುದರಿಂ ನಿದರ್ಶನಮಾಗಿರ್ಪುದು.

3. ಸ್ವಾಮಿಯವರ ಅತ್ಯಲ್ಪ ಆಳ್ವಿಕೆಯ ಕಾಲದೊಳೀರ್ಪಟ್ಟಿರ್ಪ ಅನೇಕ ಸದುಪಾಯ ರಾಜಕೀಯ ಭಾಗೆಂಗಳೂ, ಮಂತ್ರಾಲೋಚನಾ ಸಭೆಯ ಅಧಿಪತ್ಯವಂ ವಹಿಸಿ ಶ್ರೀಮನ್ಮಹಾರಾಜರವರ ಇಷ್ಟಾನುಸಾರ ಚತುರತೆಯಂ ನಡೆಸುವ ಕಾರ್ಯಂಗಳೂ, ಅಸದೃಶಬುದ್ಧಿಯಾಸ್ಥಾನವೆಂಬುದು ಸರ್ವರ ಹೃದ್ಗವ್ಯಮಾಗಿರ್ಪುದು.

4. ಸ್ವಾಮಿಯವರು ತ್ರಿದಶಾಬ್ದಗಳಿಂದಲೂ ಈ ಸಂಸ್ಥಾನದ ಆಡಳಿತಂಗಳಂ ಬಹುವಿಧಂಗಳೊಳು ಅನೇಕ ರೂಪಂಗಳೊಳು ಚಿತ್ತವಿಟ್ಟು ನಡೆಯಿಸಿ ಜನಪದ ಪ್ರೀತಿ ವಿಶ್ವಾಸಮಂ ಹೊಂದಿ ಸ್ವದೇಶಾಭಿಲಾಷೆ ಇಮ್ಮಡಿಯಾಗಿರಲದು ಅವಾತ್ಯಪದದೊಳೀಡೇರಿಸಿದುದಕೆ ಶ್ರೀ ಹರಿಹರೇಶನಂ ಸದಾ ನಿಶ್ಚಲಚಿತ್ತದಿಂ ವಂದಿಪೆವು.

5. ಸಕಲಕಲಾವಿರಾಜಮಾನರಾಗಿ ಮಹಾ ಘನತೆಯಂ ಪಡೆದ ಶ್ರೀಮನ್ಮಹಾರಾಜ ಶ್ರೀ ಕೃಷ್ಣಸಾರ್ವಭೌಮರ ಮಹಾ ಸಂಸ್ಥಾನ ಕಾರ್ಯವಿಚಾರಂಗಳಂ ಅವರ ಅನುಜ್ಞೆಯಂ ಹೊಂದಿ ಅತ್ಯುತ್ಸಾಹದಿಂ ನಡೆಯಿಪ ಸ್ವಾಮಿಯವರ ಅಸಾಮ್ಯಬುದ್ಧಿ, ಪ್ರಜಾಕ್ಷೇಮವಿಚಾರದೊಳಿರ್ಪ ವಿಶ್ವಾಸ, ಪ್ರಜಾನುಕೂಲತೆಗಾಗಿ ತೋರ್ಪ ಪ್ರೀತಿ ಅಪೂರ್ವವಾದುದೆಂಬದು ಚಿತ್ತಗೋಚರಮಾಗಿರುತ್ತಾ ಪೌರಜಾನಪದ ಕ್ಷೇಮವೂ ಸುಖವೂ ನಿಶ್ಚಲವಾದ್ದೆಂಬದನ್ನು ನಿಶ್ಶಂಕೆಯಿಂದ ಸೂಚಿಪೆವು.

6. ಅನುಪಮ ಸಾಹಸದಿಂ ಅವಿರಳವಾಗಿ ಅನುದಿನಂಗಳು ಅಮಾತ್ಯರು ಆಯಸಪಟ್ಟು ಪಡೆದ ಕೀರ್ತಿಯಿಂದಧಿಕಮಾಗಿ ಅತ್ಯಲ್ಪಕಾಲದೋಳ್ ಸ್ವಾಮಿಯವರು ಪೊಂದಿರ್ಪ ಯಶಸ್ಸು ಸುರತರುವಿನಂದದಿ ಇಷ್ಟಂಗಳಂ ಅಗಣ್ಯಮಾಗಿ ಬೀರುವುವೆಂಬದಂ ಔತ್ಸುಕ್ಯದಿಂ ನಿರೂಪಿಸುವೆವು.

7. ಸ್ಥಳಮಾಹಾತ್ಮ್ಯದಿಂದಲೂ, ಈ ಡಿಸ್ಟ್ರಿಕ್ಟಿನ ಇತರ 2—3 ತಾಲ್ಲೂಕುಗಳಿಗಿಂತ ಬರುವ ಹೆಚ್ಚು ಸುವರ್ಣಾದಾಯದಿಂದಲೂ ಈ ಹರಿಹರವನ್ನು ತಾಲ್ಲೂಕಾಗೇರ್ಪಡಿಪ ಅಭಿಲಾಷೆ ಸ್ವಾಮಿಯವರಿಗೆ ಶಿವಮೊಗ್ಗಾ ಡಿಸ್ಟ್ರಿಕ್ಟ್ ಡಿಪ್ಯೂಟಿ ಕಮಿಷನರ್ ಸ್ಥಾನದೊಳಿದ್ದ ಕಾಲದೊಳೆ ಉದಿಸಿದ್ದಂತೆ ತಿಳಿಯುತ್ತೇವಾಗಿ ತದೀಪ್ಸಿತಮಂ ಈಗಲೀಡೇರಿಸುವದರಿಂದಲೂ, ಜೀವನಕ್ಕಾಧಾರವಾದ ಜೀವನವು ತುಂಗಭದ್ರಾ ನದಿಯಿಂದ ನಲ್ಲೀಮುಖೇನ ಅನುಕೂಲಪಡಿಸುವದರಿಂದಲೂ, ಸ್ವಾಮಿಯವರ ಕೀರ್ತಿ ಶಾಶ್ವತಮಹ ಕಾರ್ಯ ಮನಸೇಂಟಬೇಕಾದುದಕೆ ವಿನಯದಿಂ ಪ್ರಾರ್ಥಿಪೆವು.

8. ಕಶ್ಯೇಪುರಂದರ, ಸುಕನ್ಯಾಚ್ಯವನ, ಸಾವಿತ್ರೀಸತ್ಯವಾನ ಧಮಯಂತೀನಹುಷರಂತೆ ಜಾಯಾ ಸಹಿತ ಕೋಭಿಪ ಶ್ರೀ ಕೃಷ್ಣಸಾರ್ವಭೌಮರ ಮನೋಭಿಷ್ಟಂಗಳಂ ಅನುವರ್ತಿಪ ಸ್ವಾಮಿಯವರ ಸುಶೀಲಸ್ವಭಾವಂಗಳು ಕೃತ, ತ್ರೇತ, ದ್ವಾಪರಯುಗಂಗಳೋಳ್ ನಡದು ಚರಿತ್ರಮುಖೇನ ಖ್ಯಾತಿಗೊಂಡಿರ್ಪವೆಂಬದಂ ಅತ್ಯಾನಂದದಿಂ ಸೂಚಿಪೆವು.

9. ಸ್ವಾಮಿಯವರ ಆಧಿಪತ್ಯದೋಳ್ ಪ್ರಜೆಗಳು ಪರಜನಹಿಂತೈಷಿಗಳಾಗಿ ಆನಂದತುಂದಿಲಚಿತ್ತರಾಗಿರುತ್ತಾರಾಗಿ ಇದಂ ಶಾಶ್ವತಮಾಗಿಯುಂ ಅವಿಚ್ಛಿನ್ನಮಾಗಿಯುಂ ನಮಗೆ ನಡೆಯಲನುಕೂಲಿಪಂತೆ ಶ್ರೀ ಹರಿಹರೇಶನು ಸ್ವಾಮಿಯವರಿಗೆ ಚಿರಾಯುವಂ, ಬಹು ಆರೋಗ್ಯಮುಂ, ಹೇರಳಶಕ್ತಿಯನ್ನಿತ್ತು ಆವಗಂ ಸಂರಕ್ಷಿಸಲೋಸುಗ ಏಕೀಭವಿಸಿ ಪ್ರಾರ್ಥಿಪೆವು.

ಇತಿ ವಿಶ್ವಾಸ ಭಕ್ತಿಭರ ಉಳ್ಳ,
ಹರಿಹರ ಸಬ್ ತಾಲ್ಲೂಕ್ ಪ್ರಜಾಪ್ರತಿನಿಧಿ ಶ್ರೀನಿವಾಸ ಸೀತಾರಾಂ ಕುಲಕರ್ಣಿ,
ರಟ್ಟಿಹಳ್ಳಿ ಗೋವಿಂದಪ್ಪ, ಮುನಿಸಿಪಾಲಿಟಿ ಮೆಂಬರು.

DEWAN'S REPLY TO THE ABOVE.

I thank you for the flattering terms in which you have been good enough to refer to me.

As regards the wants expressed in your Address, the conversion of Harihar Sub-Taluk into a Taluk is considered unnecessary; but you will be glad to know that a project is under preparation in the Public Works Department for the water-supply of Harihar Town; and this will be expedited.